ಮತ್ತೆ ಪಾಕಿಸ್ತಾನದಲ್ಲಿ ಏನಾಗಿದೆಯೋ ಏನೋ ಎಂದು ಚಾಚಾನ ಬಗ್ಗೆ ಮರುಕ ಕಾಡಹತ್ತಿತು. ಅವನಿಗೆ ಅಲ್ಲಿ ಹೀಗೂ ಇರಲು ಸಾಧ್ಯವಿಲ್ಲದೆ ಇರಬಹುದು. ಏನು ಏಕೆ ಹೇಗೆ ಎಲ್ಲಿ ಮುಗಿದ ನಂತರ ಶಿರಚ್ಛೇದನವೇ ಇರಬಹುದು. ಪಾಪ ಚಾಚಾ ಮಾಡಿದ ತಪ್ಪು ಯಾವುದು? ಒಂದು ದಿನ ಕಟ್ಟಿಗೆ ಹುಳುಗಳು ಅರ್ಧ ತಿಂದ ಪರ್ಶಿಯನ್ ಭಾಷೆಯ 'ರಾಜತರಂಗಿಣಿ'ಯನ್ನು ನನಗೆ ಕೊಟ್ಟು ಹೇಳಿದ್ದ, 'ಮಗ ನನ್ನಲ್ಲಿ ಇದ್ದ ಹಳೆಯದಾದ ಪರ್ಶಿಯನ್ ಭಾಷೆಯ ತಾಳೆಗರಿಗಳಿವು, ಅದರಲ್ಲಿ ಭಾರತೀಯ ಮೈಥಾಲಜಿಯ ಬಗ್ಗೆ ಹೊಳವುಗಳಿವೆ. ನಿನಗೆ ಕೊಡುತ್ತೇನೆ' ಎಂದು ಕೊಟ್ಟಿದ್ದ. ಅದೇ ದೇಶದ್ರೋಹವಾಯಿತು. ವಿಚಿತ್ರವೆಂದರೆ ಮೊಗಲ್ ಚಕ್ರವರ್ತಿ ಅಕ್ಬರ್, ಕಾಶ್ಮೀರದ ರಾಜನಿಗೆ ಹೇಳಿ ಅದನ್ನು ಪರ್ಶಿಯನ್ ಭಾಷೆಗೆ ಅನುವಾದಿಸಿದನಂತೆ. ಅದೇ ಪ್ರತಿ ಇದು. ಇಂದು ಇಲ್ಲಿ ತನಗೆ ಹಾಗೂ ಅಲ್ಲಿ ಚಾಚಾನಿಗೆ ದೇಶದ್ರೋಹದ ಪಟ್ಟ ಕಟ್ಟಿದೆ. ಅದೇ ವಿಷಯ ಹಂಚಿಕೆಯ ಅಪಾದನೆ ಮೇಲೆ ಆತನನ್ನು ಆ ದೇಶ ಬಂಧನದಲ್ಲಿ ಇರಿಸಿದೆ. ನನ್ನನ್ನು ಇಲ್ಲಿ ವಿಚಾರಣಾಧೀನನ್ನಾಗಿ ಮಾಡಿದೆ. ಚಾಚಾನಿಗೆ ಭಾರತವೆಂದರೆ ಎಷ್ಟು ಇಷ್ಟವೆಂದರೆ ಆತ ಹೇಳುತ್ತಿದ್ದ, 'ಮಗನೇ ಶರಣ ನನಗೆ ಭಾರತದ ಹೆಸರು ಕೇಳಿದರೆ ಕೂದಲುಗಳು ನಿಮಿರುತ್ತವೆ. ನಾವೆಲ್ಲ ಭಾರತೀಯರು ಅನ್ನುವುದಕ್ಕೆ ಸಾಕ್ಷಿ ಏನು ಬೇಕು? ಈಗ ನನ್ನದೇ ದೇಶವೇ ಎಂದು ನಾವು ಹೇಳುವ ಈ ದೇಶವೂ ಭಾರತವೇ. ಯಾಕೆಂದರೆ ಪ್ರತಿಯೊಬ್ಬ ಇಲ್ಲಿಯವರೂ ನನ್ನ ವಂಶಜರಂತೆಯೇ ಒಂದಾನೊಂದು ಕಾಲದಲ್ಲಿ ಬದಲಾದವರೇ. ಆದರೆ ಜೀನುಗಳು ಒಂದೇ.'

ವಾಘಾ ಗಡಿಯಲ್ಲಿ ಕೆಲದಿನಗಳ ಕಾಲ ಕೆಲಸ ಮಾಡಿದ ಚಾಚಾ ಎಂದೂ ಉನ್ಮಾದಕ್ಕೆ ಒಳಗಾಗಿ ಕವಾಯತಿನಲ್ಲಿ ಭಾಗಹಿಸಿದ್ದಿಲ್ಲ. ಅದಕ್ಕಾಗಿ ಸಾಕಷ್ಟು ಮೆಮೊಗಳನ್ನು ಪಡೆದಿದ್ದ.

ಚಾಚಾ ತನ್ನ ಮಗಳು ಹಾಗು ನನ್ನಕ್ಕ ರಜಿಯಾಗೆ ಹೇಳುತ್ತಿದ್ದನಂತೆ.. 'ನಿನಗೊಬ್ಬ ತಮ್ಮನಿದ್ದಾನೆ ಶರಣ ಅಂತ. ನೀನು ಅವನನ್ನು ನೋಡುವ ಹಾಗಿಲ್ಲ. ಅವನು ನಿನ್ನನ್ನು ನೋಡುವ ಹಾಗಿಲ್ಲ. ಅವನು ಇಲ್ಲಿಗೆ ಬರುವುದು ನಾನು ಅಲ್ಲಿಗೆ ಹೋಗುವುದು ಕನಸಿನ ಮಾತೇ ಸರಿ. ಆದರೆ ತಂತಿಯ ಆಚೆ ತಂತಿಯ ಈಚೆ ಹಾಗೂ ನನಗೂ ಅವನಿಗೂ ಸೇರದ ಭೂಮಿಯಲ್ಲಿ ನಿಂತು ಮಾತಾಡಬಹುದು. ಅದು ಅಲ್ಪ ಸಮಯ. ನಾವಿಬ್ಬರೂ ಪರಸ್ಪರ ವಿರೋಧಿಗಳು ಅನ್ನಿಸಿಕೊಂಡ ದೇಶದಲ್ಲಿ ನಿಂತಿದ್ದೇವೆ. ಏನು ಮಾಡಲಿ? ನೀನು ಅವನಿಗಾಗಿ ಪಾಕಿಸ್ತಾನದ ಸಿಹಿ ತಿನಿಸುಗಳಾದ ಗುಲಾಬ್ ಜಾಮೂನ್, ರಾಬ್ರಿ, ಬರ್ಫಿ, ಚುಮ್ ಚುಮ್, ಪಾಟೀಸ ಮಾಡಿಕೊಟ್ಟರೆ ನಾನು ಅವನಿಗೆ ತಲುಪಿಸಬಹುದು' ಎಂದಾಗ ತಮ್ಮನ ಸಲುವಾಗಿ ಅವಳು ಎಷ್ಟು ಸಲ ಇಂಥ ತಿಂಡಿಗಳ ಮಾಡಿಕೊಟ್ಟಳೋ ದೇವರೇ ಬಲ್ಲ. ರಜಿಯಾ ತನಗಾಗಿ ಕಳುಹಿಸಿದ ಪತ್ರದಲ್ಲಿ ಅವಳು ಏನೆಂದು ಬರೆಯುತ್ತಿದ್ದಳು. ಅದೇ ಕಣ್ಣಿಗೆ ಕಾಣದ ಎಂದೂ ಭೇಟಿಯಾಗಲಾಗದ ತಮ್ಮ ಶರಣ್ ಅಂತಲೋ, ನನ್ನ ಅಜ್ಞಾತ ತಮ್ಮನೆಂತಲೋ ಹೌದಲ್ಲವೋ? ಏನೇನೋ ಯೋಚನೆಗಳು.

ಹಿಮವರ್ಷರ್‌ಗೆ ತನ್ನ ಶ್ವಾಸ- ನಿಶ್ವಾಸದ ಮುಖಾಂತರ ಇಡೀ ದೇಹವನ್ನು ಸೇರಿದ್ದರೂ ಉಸಿರು ಮಾತ್ರ ಬೆಚ್ಚಗಿನ ಹಬೆಯನ್ನು ಉಗುಳುತ್ತಿತ್ತು. ಈ ಆರು ತಿಂಗಳು ಸಂಬಳವನ್ನು ತಡೆದಿದ್ದರು. ಈಗ ಶುಭಾಂಕರನ ಮೇಲೆಯೇ ತಾನು ಅವಲಂಬಿತನಾಗಿದ್ದೇನೆ. ತನ್ನ ತಾಯಿಗೂ ಹಣ ಕಳಿಸಬೇಕು ಎಲ್ಲಿಂದ ಕಳಿಸಬೇಕು? ನನ್ನ ಮೇಲೆ ಆಶ್ರಯಿಸಿದ ಆಕೆಯೂ ಬದುಕಬೇಕಲ್ಲ.

ಕ್ಯಾಂಪಿನಿಂದ ಅನತಿ ದೂರದಲ್ಲಿದ್ದ ರಾತ್ರಿಯ ಪಾರ್ಟಿಯಲ್ಲಿ ನಡೆದ ಘಟನೆಗಳು ಅವು ಕಪ್ಪು, ಅಲ್ಲ ಬಿಳುಪು ಅಲ್ಲವೆನ್ನುವಂತೆ ಇದ್ದವು. ಕಪ್ಪಾದರೆ ದೇಶದ್ರೋಹಿಯಾಗುತ್ತಿದ್ದೆ. ಬಿಳುಪಿನದಾಗಿದ್ದರೆ ದೇಶಭಕ್ತನಾಗಿರುತ್ತಿದ್ದೆ. ಆದರೆ ಅಲ್ಲಿ ನಡೆದ ಘಟನೆಗಳು ತನ್ನನ್ನು ಒಬ್ಬ ಬಫೂನನ್ನಾಗಿ ಮಾಡಿದ್ದವು. ಆ ಮೂಲಕ ತಮಾಷೆಯ ರಾಷ್ಟ್ರದ್ರೋಹದ ಅಪವಾದನೆಗಳು ಹೀಗೆ ಜರುಗಿದವು. ನಗಬೇಕೆಂದರೆ ನಗಲು ಆಗುತ್ತಿಲ್ಲ. ಅಳಬೇಕೆಂದರೆ ಅಳಲೂ ಆಗುತ್ತಿಲ್ಲ. ಹಾಗೆಯೇ ಟೆಂಟಿನಲ್ಲಿ ಮುದರಿ ಮಲಗಿದ್ದೆ. ದೂರದಲ್ಲಿ ಎಲ್ಲೋ ತಾತ್ಕಾಲಿಕ ಹಿಮನಿರೋಧಕ ಟೆಂಟಿನ ಕೆಳಗೆ ನಾಲ್ಕು ಕಡೆ ಉರಿಯುತ್ತಿದ್ದ ಅಗ್ನಿಷ್ಟಿಕೆಯ ಮಧ್ಯ ಬೇಯುತ್ತಿರುವವು ಎರಡು ಕೋಳಿಗಳು ಮತ್ತು ಎರಡು ಹಂದಿಗಳು ನನಗೆ ಸ್ಪಷ್ಟವಾಗಿ ಕಾಣುತ್ತಿದ್ದವು. ಕೋಳಿಗಳು ಬಂಗಾರವರ್ಣದಿಂದ ಜ್ವಾಲೆಯ ಜೊತೆ ಇನ್ನೂ ತೇಜೋಪುಂಜವಾಗಿ ಬೆಳಗಿದರೆ ಹಂದಿಗಳು